**CC No:202/2024**
**PW:1**

(ಇಂದು ದಿನಾಂಕಃ **23-04-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

## ಪಾಟೀ ಸವಾಲುಃ ಶ್ರೀ ಎಸ್ ಎಂ ಎಚ್ ವಕೀಲರಿಂದಃ

ನಾನು ಬಿ. ಎಸ್ಸಿ., ಬಿ ಎಡ್ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಹೆಂಡತಿ ಎಲ್ ಐ ಸಿ ಏಜೆಂಟ್ ಆಗಿರುತ್ತಾರೆ. ನಮಗೆ ಯಾವುದೇ ಜಮೀನುಗಳು ಇರುವುದಿಲ್ಲ ಎಂದರೆ ಸರಿ. ನಾನು ಯಾವುದೇ ನೌಕರಿ ಮಾಡುವುದಿಲ್ಲ. ನವಲಗುಂದದಲ್ಲಿ ಜನರಲ್ ವಿಮೆ ತುಂಬಿಸಲು ನನ್ನ ಹೆಂಡತಿಯ ಹೆಸರಿನಲ್ಲಿ ಪೋರ್ಟಲ್ ಕಚೇರಿ ಇದೆ ಎಂದರೆ ಸರಿ. ಕಾರಣ ಅಲ್ಲಿ ಸಾಕಷ್ಟು ಜನ ಬಂದು ವಿಮೆ ಮಾಡಿಸುತ್ತಾರೆ ಎಂದರೆ ಸರಿ. ನನ್ನ ಹೆಂಡತಿ ಇಲ್ಲದ ವೇಳೆ ನಾನು ಸದರಿ ಕಚೇರಿಯಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ಜಯಶ್ರೀ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಹೆಸರು ಕರುಣಾ. ಸಾಕ್ಷಿಗೆ ಈಗ 2 ಎಲ್ ಐ ಸಿ ಪಾಲಿಸಿಯ ಬಾಂಡ್ ಗಳನ್ನು ತೋರಿಸಿದ್ದು ಅದರಲ್ಲಿರುವ ಹೆಸರು ನನ್ನ ಹೆಂಡತಿಯದು ಎಂದು ಒಪ್ಪಿಕೊಂಡಿದ್ದರಿಂದ ಅವುಗಳನ್ನು **ನಿಡಿ-1** ಮತ್ತು **ನಿಡಿ-2** ಎಂದು ಗುರುತಿಸಲಾಯಿತು. **(ಈ ಹಂತದಲ್ಲಿ ಫಿರ್ಯಾದಿದಾರರ ಪರ ವಕೀಲರು ಸದರಿ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಲು ಸದರಿ ದಾಖಲೆಗಳು ಫಿರ್ಯಾದಿಯ ಹೆಸರಿನಲ್ಲಿ ಇರದ ಕಾರಣ ಅವುಗಳನ್ನು ಗುರುತಿಸಲು ಬರುವುದಿಲ್ಲ ಎಂದು ತಕರಾರು ಸಲ್ಲಿಸಿದ್ದು, ಆದರೆ ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ತಕರಾರನ್ನು ತಳ್ಳಿ ಹಾಕಿ ನಿಶಾನೆಗಳೆಂದು ಗುರುತಿಸಲಾಯಿತು)** ಸದರಿ 2 ಪಾಲಿಸಿಗಳು ಆರೋಪಿ ಮತ್ತು ಆತನ ಹೆಂಡತಿಯ ಹೆಸರನಲ್ಲಿ ಮಾಡಿದ ಪಾಲಿಸಿಗಳಾಗಿರುತ್ತವೆ ಎಂದರೆ ಸರಿ. ಸಾಕ್ಷಿಗೆ ಪುನಃ 2 ಎಲ್ ಐ ಸಿ ಯ ವಿಮೆಗಳನ್ನು ತೋರಿಸಿದ್ದು ಅವುಗಳನ್ನು ನೋಡಿ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ನನಗೆ ಹಣಕಾಸಿನ ವ್ಯವಹಾರದ ಬಗ್ಗೆ ಮಾಹಿತಿ ಇರುವುದಿಲ್ಲ. ನಾನು ಟ್ಯೂಷನ್ ಹೇಳುವುದಕ್ಕೆ ಸಂಬಂಧಿಸಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ.

2. ನಾನು ಸಿಂಡಿಕೇಟ್ ಬ್ಯಾಂಕ್ ನಿಂದ ರೂ. 2,00,000/- ಗಳನ್ನು ತೆಗೆದುಕೊಂಡು ಬಂದು ಆರೋಪಿಗೆ ನೀಡಿರುತ್ತೇನೆ. ಸದರಿ ಹಣವನ್ನು 08-06-2020 ರಂದು ಬ್ಯಾಂಕ್ ನಿಂದ ಪಡೆದುಕೊಂಡಿರುತ್ತೇನೆ. ಸದರಿ ಹಣವನ್ನು ಬ್ಯಾಂಕ್ ನಿಂದ ಪಡೆದುಕೊಂಡ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿಯು ತಾನು ಹಾಜರು ಪಡಿಸಿದ ದಾಖಲೆಗಳನ್ನು ನೋಡಿ ಅದರಲ್ಲಿ ಬ್ಯಾಂಕ್ ನಿಂದ ಹಣ ಪಡೆದುಕೊಂಡ ಬಗ್ಗೆ ದಾಖಲೆ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರೆದು ನಾನು ಸದರಿ ದಾಖಲೆಯನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯನ್ನು ವಕೀಲರಿಗೆ ಪ್ರಕರಣ ಸಲ್ಲಿಸಿದ ನಂತರ ಸ್ವಲ್ಪ ದಿನದ ನಂತರ ನೀಡಿರುತ್ತೇನೆ. ನನ್ನ ಸಿಂಡಿಕೇಟ ಬ್ಯಾಂಕ್ ನ ಖಾತೆಯ ಸಂಖ್ಯೆಃ 23505

ಆಗಿರುತ್ತದೆ. ನಾನು ಆರೋಪಿಗೆ 3-4 ಬಾರಿ ರೂ. 50,000/- ಗಳಂತೆ ಹಣ ನೀಡಿರುತ್ತೇನೆ. ಆದರೆ ಸದರಿ ಹಣವನ್ನು ಯಾವಾಗ ನೀಡಿರುತ್ತೇನೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಸದರಿ ವಿವರಗಳು ನನ್ನ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ನಲ್ಲಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಹಣವನ್ನು ಆರೋಪಿ ನನಗೆ ಚೆಕ್ ಮುಖಾಂತರ ಹಣ ಮರು ಪಾವತಿ ಮಾಡಿರುತ್ತಾರೆ. ಸದರಿ ಎಲ್ಲಾ ಹಣವನ್ನು 2019-20 ರ ಸಾಲಿನಲ್ಲಿ ಮರು ಪಾವತಿ ಮಾಡಲಾಗಿರುತ್ತದೆ. ಸದರಿ ಎಲ್ಲಾ ಚೆಕ್ ಗಳನ್ನು ನಾನು ನಗದೀಕರಣಕ್ಕಾಗಿ ಬ್ಯಾಂಕ್ ಗೆ ಸಲ್ಲಿಸಿರುತ್ತೇನೆ. ಸದರಿ ಚೆಕ್ ನ ವಿವರಗಳುಳ್ಳ ಬ್ಯಾಂಕ್ ಖಾತೆಯ ವಿವರಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ಸದರಿ 3-4 ಬಾರಿ ಆದ ಹಣದ ವ್ಯವಹಾರದ ಕುರಿತು ನನ್ನ ದೂರಿನಲ್ಲಿ ಬರೆಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ವ್ಯವಹಾರಗಳಲ್ಲಿ ಯಾವುದೇ ತೊಂದರ ಆಗದ ಕಾರಣ ಬರೆಸಿರುವುದಿಲ್ಲ ಎಂದು ನುಡಿದಿರುತ್ತಾರೆ.

3. ನಾನು ಆರೋಪಿಗೆ ರೂ. 2,00,000/- ಪಾವತಿ ಮಾಡುವಾಗ ಆತನಿಂದ ಯಾವುದೇ ಕಾಗದ ಪತ್ರಗಳನ್ನು ಬರೆಸಿಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿ ನನ್ನ ಸಂಬಂಧಿಕನಾದ ಕಾರಣ ಹಾಗೂ ಈ ಹಿಂದೆ ನಮ್ಮ ನಡುವೆ ವ್ಯವಹಾರಗಳು ಆಗಿರುವ ಕಾರಣ ನಾನು ಬರೆಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಮಾನ್ಯವಾಗಿ ರೂ. 20,000/- ಕ್ಕಿಂತ ಹೆಚ್ಚಿನ ವ್ಯವಹಾರ ಬ್ಯಾಂಕ್ ಖಾತೆಯ ಮುಖಾಂತರ ಆಗಬೇಕು ಎಂದರೆ ಸರಿ. ಆರೋಪಿ ದಿನಾಂಕಃ 01-06-2020 ರಂದು ನನಗೆ ರೂ. 2,00,000/- ಗಳನ್ನು ಕೇಳಿರುತ್ತಾನೆ. ನಂತರ ನಾನು ದಿನಾಂಕಃ 08-06-2020 ರಂದು ಸದರಿ ಹಣವನ್ನು 2 ತಿಂಗಳುಗಳ ಮಟ್ಟಿಗೆ ಕೊಟ್ಟಿರುತ್ತೇನೆ. ಸದರಿ ಹಣ ಪಾವತಿ ಮಾಡುವ ವೇಳೆ ನಾನು ಮಾತ್ರ ಇದ್ದೆ. ಸಾಕ್ಷಿಯು ಮುಂದುವರೆದು ಈ ಹಿಂದೆ ಸಹ ನಾನೊಬ್ಬನೇ ಹಣ ಪಾವತಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. 2 ತಿಂಗಳುಗಳ ನಂತರ ಆರೋಪಿ ನಮ್ಮ ಮನೆಯ ಪಕ್ಕದ ನಮ್ಮ ಅಣ್ಣನ ಮನೆಗೆ ಬಂದಾಗ ನಾನು ಹಣ ಕೇಳಿರುತ್ತೇನೆ. ಸದರಿಯವರು ಅಗಸ್ಟ ಕೊನೆಯ ವಾರದಲ್ಲಿ ಸದರಿಯವರ ಮನೆಗೆ ಬಂದಿರುತ್ತಾರೆ. ಸದರಿಯವರು ಮನೆಯ ಹೊರಗಡೆ ಇದ್ದಾಗ ನಾನು ಅವರಿಗೆ ಹಣ ಮರು ಪಾವತಿ ಮಾಡುವಂತೆ ಕೇಳಿರುತ್ತೇನೆ. ನಂತರ ಸದರಿಯವರು 1 ವಾರದ ಬಳಿಕ ಹಣ ಕೊಡುತ್ತೇನೆಂದು ತಿಳಿಸಿ ಸಪ್ಟೆಂಬರ್ ನಲ್ಲಿ ಚೆಕ್ ನೀಡಿರುತ್ತಾರೆ.

4. ಸಾಕ್ಷಿಗೆ ಆರೋಪಿಯ ಖಾತೆಯ ವಿವರವನ್ನು ತೋರಿಸಿದ್ದು ಅದನ್ನು ನೋಡಿ ದಿನಾಂಕಃ 18-05-2019 ರಂದು ಆರೋಪಿ ನನ್ನ ಖಾತೆಗೆ ರೂ. 1,00,000/- ಪಾವತಿಸಿರುತ್ತಾರೆ ಎಂದು ಒಪ್ಪಿಕೊಂಡ ಕಾರಣ ಅದನ್ನು **ನಿಡಿ-3** ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಆರೋಪಿಯ ಖಾತೆಯ ಇನ್ನೊಂದು ವಿವರವನ್ನು ತೋರಿಸಿದ್ದು ಅದನ್ನು ನೋಡಿ ದಿನಾಂಕಃ 15-

04-2020 ರಂದು ಆರೋಪಿ ನನ್ನ ಖಾತೆಗೆ ರೂ. 4,00,023/- ಪಾವತಿಸಿರುತ್ತಾರೆ ಎಂದು ಒಪ್ಪಿಕೊಂಡ ಕಾರಣ ಅದನ್ನು **ನಿಡಿ-4** ಎಂದು ಗುರುತಿಸಲಾಯಿತು. ಸಾಕ್ಷಿಯು ನಾನು ಈ ಹಿಂದೆ ಪಾವತಿಸಿದ್ದ ಹಣವನ್ನು ಮರು ಪಾವತಿ ಮಾಡಿದ್ದರ ಕುರಿತು ಸದರಿ ವಿವರಗಳು ಇರುತ್ತವೆ ಎಂದು ನುಡಿದಿರುತ್ತಾರೆ. ನನಗೆ ಚೆಕ್ ಗಳ ಬಗ್ಗೆ ಮಾಹಿತಿ ಇರುತ್ತದೆ.

5. ನಿಪಿ-1 ರಲ್ಲಿ 2010 ಎಂದು ಚೆಕ್ ನ ಎಡಬದಿಗೆ ನಮೂದಾಗಿದೆ ಎಂದರೆ ಸಾಕ್ಷಿಯು ಆರೋಪಿ ನೀಡಿದ ಚೆಕ್ ನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನಿಪಿ-1 ಮತ್ತು 2 ರಲ್ಲಿರುವ ಹಸ್ತಾಕ್ಷರಗಳು ಒಂದೇ ಆಗಿರುತ್ತವೆ ಎಂದರೆ ಸರಿಯಲ್ಲ. ನಿಪಿ-1 ನ್ನು ಯಾರು ಬರೆದು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ನನ್ನ ಮುಂದೆ ಚೆಕ್ ಗೆ ಸಹಿ ಮಾಡಿ ನನಗೆ ಕೊಟ್ಟಿರುತ್ತಾನೆ ಎಂದು ನುಡಿದಿರುತ್ತಾರೆ. ಸಿಂಡಿಕೇಟ್ ಬ್ಯಾಂಕ್ ದಿನಾಂಕಃ 01-04-2020 ರಂದು ಕೆನರಾ ಬ್ಯಾಂಕ್ ಎಂದು ಆಗಿರುತ್ತದೆ ಎಂದರೆ ಸರಿ. ನಾನು ಚೆಕ್ ನ್ನು ಬ್ಯಾಂಕ್ ಗೆ ಸಲ್ಲಿಸುವ ವೇಳೆ ಕೆನರಾ ಬ್ಯಾಂಕ್ ಆಗಿತ್ತು ಎಂದರೆ ಸರಿ. ಆರೋಪಿಗೆ ನೀಡಿದ ನೋಟಿಸಗೆ ಸಂಬಂಧಿಸಿ ಅವನಿಗೆ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು ಹಾಜರು ಪಡಿಸಿದ್ದೀರಾ ಎಂದರೆ ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಖಾಸಗಿ ಬ್ಯಾಂಕ್ ನಲ್ಲಿ ಪಿಗ್ಮಿ ಸಂಗ್ರಹ ಮಾಡುವ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಕಾರಣ ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನಮ್ಮ ಕುಟುಂಬಕ್ಕೆ ಸಂಬಂಧಿಸಿ ನಮಗೆ ಬಿ ಪಿ ಎಲ್ ಕಾರ್ಡ ಇರುತ್ತದೆ. ಆರೋಪಿ ನನಗೆ ನೀಡಿದ ರೂ. 4,00,000/- ಗಳನ್ನು ಮರಳಿ ಕೇಳಿದ್ದಕ್ಕೆ ನಾನು ಅವನು ನೀಡಿದ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಆದಾಯದ ಮೂಲವನ್ನು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ವಿಮೆ ಕಂತನ್ನು ಪಾವತಿಸಲು ಆರೋಪಿ ನೀಡಿದ ಚೆಕ್ ನ್ನು ನಾನು ದುರುಪಯೋಗ ಪಡಿಸಿಕೊಂಡು ಆತನ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**